ಫಾರಂ ನಂ.4 (ಕ್ರಿಮಿನಲ್)
ಡಿಪೋಶಿಷನ್ ಶೀಟ್ಸ್

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ ಸಿ ನಂಃ *144/2015***

ಸಾಕ್ಷಿಯ ಹೆಸರು ಃ ಹೆಚ್.ಎಸ್.ಸುರೇಶ್ ಸಿಡಬ್ಲ್ಯುಃ *21*

ತಂದೆಯ ಹೆಸರು ಃ ಶಂಕರಯ್ಯ ಬಿ. ಪಿಡಬ್ಲ್ಯುಃ*03*

ವಯಸ್ಸು ಃ *49* ವರ್ಷ

ಉದ್ಯೋಗ ಃ ಸಿ.ಪಿ.ಐ ತರೀಕೆರೆ

ವಾಸ ಸ್ಥಳ ಃ ತರೀಕೆರೆ

**ದಿನಾಂಕಃ *10-02-2021* ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಸಿ.ಆರ್.ಪಿ.ಸಿ ಕಲಂ. *299* ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆ**

**ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು *26-07-2011* ರಿಂದ *27-07-2014* ರವರೆಗೆ ತರೀಕೆರೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದೆನು. ದಿಃ *18-09-2019* ರಿಂದ ಇಲ್ಲಿಯವರೆಗೆ ಸದರಿ ಠಾಣೆಯಲ್ಲಿ ಮತ್ತೊಮ್ಮೆ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ *16-11-2011* ರಂದು ಮುಂದಿನ ತನಿಖೆಯನ್ನು ಚಾಸಾ *19* ರವರಿಂದ ಪಡೆದಿರುತ್ತೇನೆ. ದಿಃ *23-04-2012* ರಂದು ಬಾಣಾವರ ಅರಸೀಕೆರೆಯ ಮೊಕದ್ದಮೆ ನಂಃ *195/2011* ರ ಪ್ರಕರಣದಲ್ಲಿ ಆರೋಪಿಗಳು ದಸ್ತಗಿರಿಯಾಗಿದ್ದು, ಸದರಿಯವರು ಈ ಪ್ರಕರಣದಲ್ಲಿ ಕೂಡಾ ಒಳಗೊಂಡಿದ್ದರಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ಒಡವೆಗಳನ್ನು ಕೂಡಾ ನಮಗೆ ಹಸ್ತಾಂತರಿಸಿರುತ್ತಾರೆ. ಅದನ್ನು ಠಾಣಾ ಮಾಲು ಪಟ್ಟಿ *62/2012* ಕ್ಕೆ ನೋಂದಾಯಿಸಿರುತ್ತೇನೆ. ದಿಃ *02-12-2012* ರಂದು ನಮ್ಮ ಠಾಣಾ ಪಿ ಎಫ್ *108/2011* ರಲ್ಲಿ ಅಮಾನತ್ತುಪಡಿಸಿಕೊಂಡ ಇನ್ನೋವಾ ಕಾರನ್ನು ನ್ಯಾಯಾಲಯದ ಆದೇಶದ ಮೇರೆಗೆ ಅದರ ಆರ್ ಸಿ ಮಾಲೀಕರಾದ ಚಾಸಾ *17* ರವರಿಗ ಬಿಡುಗಡೆ ಮಾಡಿ ಅವರ ಹೇಳಿಕೆ ಪಡೆದಿರುತ್ತೇನೆ.

ದಿಃ *24-04-2012* ರಂದು *1* ರಿಂದ *7*ನೇ ಆರೋಪಿತರನ್ನು ಹಾಜರುಪಡಿಸಲು ನ್ಯಾಯಾಲಯಕ್ಕೆ ಬಾಡಿ ವಾರೆಂಟ್ ಆದೇಶ ಮಾಡಲು ಕೋರಿಕೆ ಸಲ್ಲಿಸಿರುತ್ತೇನೆ ದಿಃ *12-08-2012* ರಂದು ಚಾಸಾ *1* ರವರ ಮರುಹೇಳಿಕೆ ಪಡೆದಿರುತ್ತೇನೆ. ಸಾಕ್ಷಿದಾರರಾದ ಚಾಸಾ *2, 3, 4* ಮತ್ತು *5* ರವರ ಹೇಳಿಕೆಗಳನ್ನು ಪಡೆದಿದ್ದೇನೆ. ನಾನು ಬೇರೊಂದು ಪ್ರಕರಣದಲ್ಲಿ ತನಿಖೆ ಹೋಗಬೇಕಾಗಿದ್ದರಿಂದ ಪ್ರಕರಣದ ಕಡತವನ್ನು ಉಪನಿರೀಕ್ಷಕರಿಗೆ ಕೊಟ್ಟು ದಿಃ *25-08-2012* ರಂದು

ಕಡತವನ್ನು ಮತ್ತೆ ಪಡೆದುಕೊಂಡು ತನಿಖೆ ಮುಂದುವರಿಸಿದ್ದೇನೆ. ಅದೇ ದಿನ *2* ಮತ್ತು *3* ನೇ ಆರೋಪಿತರಿಗೆ ಗುರುತು ಹಚ್ಚುವ ಪೇರೆಡ್ ಮಾಡಿಸುವ ಉದ್ದೇಶದಿಂದ ತಾಲ್ಲೂಕು ದಂಡಾಧಿಕಾರಿಯವರಿಗೆ ಕೋರಿಕೆ ಕೊಟ್ಟಿದ್ದೇನೆ. ದಿಃ ***31-08-2012*** ರಂದು ಸದರಿ ಗುರುತು ಹಚ್ಚುವ ಪರೇಡನ್ನು ದಂಡಾಧಿಕಾರಿಯವರ ಸಮಕ್ಷಮ ಮುಗಿಸಿರುತ್ತೇನೆ. ದಿಃ***05-09-2012*** ರಂದು ವರದಿಯನ್ನು ತಾಲ್ಲೂಕು ದಂಡಾಧಿಕಾರಿಯವರಿಂದ ಪಡೆದಿರುತ್ತೇನೆ. ಪ್ರಕರಣದ ತನಿಖೆ ಮುಕ್ತಾಯಗೊಂಡಿದ್ದ ಕಾರಣ ಆರೋಪಿಗಳ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನನಾು ತಾಲ್ಲೂಕು ದಂಡಾಧಿಕಾರಿಯವರಿಗೆ ನೀಡಿದ ಕೋರಿಕೆ ಪತ್ರವನ್ನು ನಿಪಿ *19* ಎಂದು, ತಾಲ್ಲೂಕು ದಂಡಾಧಿಕಾರಿಯವರು ನನಗೆ ನೀಡಿದ ವರದಿಯನ್ನು ನಿಪಿ *20* ಎಂದು ಗುರುತಿಸಲಾಯ್ತು.

ಮರುವಿಚಾರಣೆ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**

**(ಎಂ.ಸಿ. ನಂಜೇಗೌಡ)**
**ಪ್ರಪ್ರದನ್ಯಾದಂಃ ತರೀಕೆರೆ.**